ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 589
ಸದಸ್ಯರ ಹೆಸರು : ಶ್ರೀ ಕೆ.ಸಿ. ಕೊಂಡಯ್ಯ
ಉತ್ತರಿಸಬೇಕಾದ ದಿನಾಂಕ : 24-09-2020
ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

***

	ಪ್ರಶ್ನೆ		ಉತ್ತರ
ಅ)	ರಾಜ್ಯದಲ್ಲಿ ವಿದ್ಯುತ್ ಕಾಯಿದೆಯ ತಿದ್ದುಪಡಿ ಪ್ರಸ್ತಾವವನ್ನು ಮರು ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಅಭಿಪ್ರಾಯ ವ್ಯಕ್ತಪಡಿಸಿದೆಯೇ ;	ಅ)	ಕೇಂದ್ರ ಇಂಧನ ಮಂತ್ರಾಲಯವು ವಿದ್ಯುಚ್ಛಕ್ತಿ ಕಾಯ್ದೆ – 2003 ಕ್ಕೆ ಪ್ರಸ್ತಾಪಿಸಿರುವ ತಿದ್ದುಪಡಿಗಳ ಬಗ್ಗೆ ಸರ್ಕಾರದ ತನ್ನ ಅಭಿಪ್ರಾಯವನ್ನು ಸಲ್ಲಿಸಿದೆ.
ಆ)	ಹಾಗಿದ್ದಲ್ಲಿ, ಇದರಿಂದ ಉಚಿತ ವಿದ್ಯುತ್ ಪೂರೈಸುವ ಯೋಜನೆಗಳಿಗೆ ಧಕ್ಕೆಯಾಗುವುದು ಸರ್ಕಾರದ ಗಮನದಲ್ಲಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ?	ಆ)	ರೈತರಿಗೆ ಉಚಿತ ವಿದ್ಯುತ್ ಪೂರೈಸಲು ಅನುದಾನವನ್ನು Direct Benefit Transfer (DBT) ಮೂಲಕ ವಿತರಿಸುವ ವಿಧಾನ ಕುರಿತು ತಿದ್ದುಪಡಿಯನ್ನು ಕೇಂದ್ರ ಇಂಧನ ಮಂತ್ರಾಲಯವು ಪ್ರಸ್ತಾಪಿಸಿದ್ದು, ಈ ಅನುದಾನ ಹಂಚಿಕೆಯ ವಿಧಾನವನ್ನು ರಾಜ್ಯ ಸರ್ಕಾರದ ಹಂತದಲ್ಲಿಯೇ ನಿರ್ಧಾರ ಕೈಗೊಳ್ಳುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಸಂಖ್ಯೆ:ಎನರ್ಜಿ 193 ಇಬಿಎಸ್ 2020

ಬಿ.ಎಸ್. ಯಡಿಯೂರಪ್ಪ
(ಬಿ.ಎಸ್. ಯಡಿಯೂರಪ್ಪ)
ಮುಖ್ಯ ಮಂತ್ರಿ